ಅಸಲು ದಾವಾ ಸಂ: 169/2015

ಡಿ.ಡಬ್ಲ್ಯು:1 / 3 ನೇ ಪ್ರತಿವಾದಿ

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 03.02.2025**

**ಮುಖ್ಯ ವಿಚಾರಣೆ : ಶ್ರೀ ಎ.ಎಂ.ಎನ್. 3 ನೇ ಪ್ರತಿವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

3 ನೇ ಪ್ರತಿವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1(ಆ) ರಂತೆ ಅರ್ಜಿಯ ಜೊತೆಗೆ ಅದರಲ್ಲಿ ಹೇಳಿರುವಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ವಾದಿ ಪರ ವಕೀಲರು ಸದರಿ ಅರ್ಜಿಯನ್ನು ಖರ್ಚಿನೊಂದಿಗೆ ಮಾನ್ಯ ಮಾಡಬಹುದೆಂದು ಹೇಳಿರುತ್ತಾರೆ. ಆದುದರಿಂದ, ಸದರಿ ಅರ್ಜಿಯನ್ನು ರೂ.100/- ಖರ್ಚಿನೊಂದಿಗೆ ಮಾನ್ಯ ಮಾಡಲಾಯಿತು.

ನಾನು ದಿನಾಂಕ 16.10.2014 ರ ನೋಂದಾಯಿತ ದಾನಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ-1** ಎಂದು ಗುರುತಿಸಲಾಯಿತು.

ನಾನು ಒಂದು ಗಣಕೀಕೃತ ಮ್ಯುಟೇಷನ್ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ-2** ಎಂದು ಗುರುತಿಸಲಾಯಿತು.

ನಾನು ಮಿಟ್ಟೇಮರಿ ಗ್ರಾಮದ ಸ.ನಂ.299/6 ರ ಒಟ್ಟು 11 ಗಣಕೀಕೃತ ಪಹಣಿ ಪ್ರತಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಡಿ-3 ರಿಂದ 13** ಎಂದು ಗುರುತಿಸಲಾಯಿತು.

ಅಸಲು ದಾವಾ ಸಂ: 169/2015

ಡಿ.ಡಬ್ಲ್ಯು:1 / 3 ನೇ ಪ್ರತಿವಾದಿ

ನಾನು ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು **ನಿಡಿ-14** ಎಂದು ಗುರುತಿಸಲಾಯಿತು.

ನಾನು ಎರಡು ಕಂದಾಯ ರಶೀದಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಕ್ರಮವಾಗಿ **ನಿಡಿ-15** ಎಂದು ಗುರುತಿಸಲಾಯಿತು.

ಅಸಲು ದಾವಾ ಸಂಖ್ಯೆ 132/2015ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತಿದ್ದೇನೆ, ಅವುಗಳನ್ನು ಒಟ್ಟಾಗಿ **ನಿಡಿ-15** ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ 3 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.